# ನಮ್ಮ ‘ಅತ್ತೆ’ ಶ್ರೀಮಾತೆ

ಮೂಲ ಬಂಗಾಳಿ : **ಗೋಪಾಲಚಂದ್ರ ಮಂಡಲ್** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ನಾ**ನು ಈಗ ಹೇಳುತ್ತಿರುವುದು ೧೯೧೫ ರಿಂದ ೧೯೧೮ರ ನಡುವಿನ ಸಮಯದಲ್ಲಿ ನಡೆದ ವಿಷಯವನ್ನು ಕುರಿತು. ಆಗ ನಾನು ದೊಡ್ಡವನಾಗಿದ್ದೆ. ೧೬–೧೭ ವರ್ಷ ವಯಸ್ಸು. ಬಹುತೇಕ ಎಲ್ಲವೂ ನನಗೆ ನೆನಪಿನಲ್ಲಿದೆ. ಶ್ರೀಮಾತೆಯವರ ಹೊಸ ಮನೆಯ ನಿರ್ಮಾಣವಾದುದು ನನಗೆ ನೆನಪಿದೆ. ಶರತ್ ಮಹಾರಾಜ್ (ಸ್ವಾಮಿ ಶಾರದಾನಂದರು) ಜಯರಾಮಬಾಟಿಗೆ ಬಂದು, ಅಲ್ಲಿ ತಂಗಿದ್ದರು. ಮಾಸ್ಟರ್ ಮಹಾಶಯ (ಶ್ರೀ ‘ಮ’) ಅವರು ಕೂಡ ಬಂದಿದ್ದರು. ರಾಧುವಿನ ಕಥೆ, ಅವಳ ಗಂಡನ ವಿಷಯ ಎಲ್ಲವೂ ಚೆನ್ನಾಗಿ ನೆನಪಿದೆ. ಎಲ್ಲಕ್ಕಿಂತ ಹೆಚ್ಚಾಗಿ ಶ್ರೀಮಾತೆ ಶಾರದಾದೇವಿಯರು ನಮ್ಮ ಪಾಲಿಗೆ ‘ಅತ್ತೆ’ಯಾಗಿದ್ದರು ಎಂಬ ವಿಷಯ ನೆನಪಾಗುವುದು.

ನಾವು ಶ್ರೀಮಾತೆಯವರನ್ನು ‘ಅತ್ತೆ’ ಎಂದೇ ಕರೆಯುತ್ತಿದ್ದೆವು. ನನ್ನ ತಾಯಿಯವರನ್ನು ಅವರು ‘ಸೊಸೆ’ ಎಂದು ಕರೆಯುತ್ತಿದ್ದರು; ಹಾಗೂ ನನ್ನ ಅಜ್ಜಿಯನ್ನು ‘ಚಿಕ್ಕಮ್ಮ’ ಎಂದು ಕರೆಯುತ್ತಿದ್ದರು. ನನ್ನ ತಂದೆ ಭೂಷಣ ಮಂಡಲ್ ಅವರು ವಯಸ್ಸಿನಲ್ಲಿ ಶ್ರೀಮಾತೆಯವರಿಗಿಂತ ತುಸು ಚಿಕ್ಕವರಾಗಿದ್ದರು. ನನ್ನ ‘ಅತ್ತೆ’ಯನ್ನು ನನ್ನ ತಂದೆ ‘ಅಕ್ಕ’ ಎಂದೇ ಕರೆಯುತ್ತಿದ್ದರು. ನನ್ನ ಅಜ್ಜಿ ಸತ್ಯಭಾಮಾ ಮಂಡಲ್, ನನ್ನ ‘ಅತ್ತೆ’ಯನ್ನು ದಕ್ಷಿಣೇಶ್ವರಕ್ಕೆ ಕರೆದುಕೊಂಡು ಹೋಗುತ್ತಿದ್ದರು. ‘ಅತ್ತೆ’ ಕೂಡ ಜಯರಾಮಬಾಟಿಯಿಂದ ಕಾಮಾರಪುಕುರ ಅಥವಾ ಶಿಹೋರ್‌ಗೆ ಹೋಗುವಾಗ ನನ್ನ ಅಜ್ಜಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಅತ್ತೆಯವರ ಹೊಸ ಮನೆಯ ಪಕ್ಕದಲ್ಲಿದ್ದ ‘ಪುಣ್ಯಪುಕುರ’ ಕೆರೆಯ ತೀರದಲ್ಲೇ ನಮ್ಮ ಮನೆಯಿದ್ದುದು. ಅತ್ತೆಯವರ ವಿಚಾರವಾಗಿ ನಮಗೆ ಏನೊಂದೂ ಅರ್ಥವಾಗುತ್ತಿರಲಿಲ್ಲ; ಅವರು ಏನನ್ನೂ ಬಿಟ್ಟುಕೊಡುತ್ತಿರಲಿಲ್ಲ. ಅನಂತರ ನಮಗೆ ತಿಳಿಯಿತು, ಅಷ್ಟು ಸರಳವಾಗಿ ಇರುವುದೂ ಸಾಮಾನ್ಯರ ಕೈಯಲ್ಲಿ ಸಾಧ್ಯವಿಲ್ಲದ ಮಾತು ಎಂದು. ಅವರ ಜೀವನದ ಸಾಮಾನ್ಯ ಘಟನೆಗಳನ್ನು ಕೂಡ ಈಗ ನೆನಪಿಸಿಕೊಂಡರೆ, ಅವೆಲ್ಲ ಅಸ್ವಾಭಾವಿಕವೆಂದೇ ಅನ್ನಿಸುತ್ತದೆ. ಅವರಂತೂ ಮನುಷ್ಯರಲ್ಲ. ಆದ್ದರಿಂದಲೇ ಅವರು ಅಷ್ಟೊಂದು ನಿರಾಡಂಬರದಿಂದ, ಅತ್ಯಂತ ಸಹಜವಾಗಿ ಸರಳ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಯಿತು!



ಅವರು ನಮ್ಮ ಮನೆಗೆ ಅನೇಕ ಬಾರಿ ಬಂದು ಹೋಗುತ್ತಿದ್ದರು. ಊಟ ಇತ್ಯಾದಿಗಳೆಲ್ಲ ಮುಗಿದ ಮೇಲೆ, ಸಂಜೆ ಹೊತ್ತು ಕೆಲವೊಮ್ಮೆ ಬರುತ್ತಿದ್ದರು. ನನ್ನ ತಾಯಿ, ಅಜ್ಜಿಯವರೊಂದಿಗೆ ಮಾತುಕತೆ ನಡೆಸುತ್ತಿದ್ದರು. ಒಂದೊಂದು ಬಾರಿ, ಹಠಾತ್ತಾನೆ ಕಲ್ಕತ್ತೆಯಿಂದ ನಾಲ್ಕು–ಐದು ಜನ ಭಕ್ತರು ಬಂದುಬಿಡುತ್ತಿದ್ದರು. ‘ಅತ್ತೆ’ಯವರು ಬಂದು ನನ್ನ ತಾಯಿಗೆ ಹೇಳುತ್ತಿದ್ದರು: ‘‘ಅಮ್ಮಾ, ಸೊಸೆ, ಸ್ವಲ್ಪ ಸೊಪ್ಪು–ತರಕಾರಿ ಇದ್ದರೆ ಕೊಡು. ದೂರದ ಊರಿನಿಂದ ನಾಲ್ಕೈದು ಜನ ನನ್ನ ಮಕ್ಕಳು (ಶಿಷ್ಯಂದಿರು) ಬಂದಿದ್ದಾರೆ.’’ ನನ್ನ ತಾಯಿ ಅವಸರವಾಗಿ ಆಲೂಗಡ್ಡೆ, ಹೀರೇಕಾಯಿ, ಕುಂಬಳಕಾಯಿ – ಹೀಗೆ ಏನಿತ್ತೋ ಅದನ್ನು ತಂದು ಕೊಡುತ್ತಿದ್ದರು. ಒಂದು ದಿನ ಸಾಯಂಕಾಲ ನಾನು ಸೋರೆಕಾಯಿಯನ್ನು ಕೊಯ್ದು ತಂದು ಶ್ರೀಮಾತೆಯವರಿಗೆ ಕೊಟ್ಟಿದ್ದೆ–

ನನಗದು ನೆನಪಿದೆ. ಅವರು ಹೇಗೆ ಸಾಮಾನ್ಯ ಸಂಗತಿಯನ್ನು ಅಸಾಮಾನ್ಯಗೊಳಿಸಿ ತಮ್ಮಂದಿರ ಸಂಸಾರವನ್ನು ಬೆಳಗುತ್ತಿದ್ದರೋ, ಅದೇ ರೀತಿ ಅವರು ಯಾವ ಭಕ್ತರಿಗೂ ಸಂಸಾರವೆಂಬುದು ಬಂಧನವೆಂದು ತಿಳಿಯಹೇಳುತ್ತಿರಲಿಲ್ಲ.'ಅತ್ತೆ'ಯವರ ತಮ್ಮಂದಿರ ಸಂಸಾರವೋ, ತುಂಬಾ ದೊಡ್ಡದು. ಅನೇಕ ಮಕ್ಕಳು ಮಂದಿ. ಆದರೆ ತಮ್ಮಂದಿರ ಕೆಲಸ, ಉದ್ಯೋಗ ಹೇಳುವಷ್ಟೇನೂ ಚೆನ್ನಾಗಿರಲಿಲ್ಲ.

ಶ್ರೀಮಾತೆಯವರ ಪ್ರೀತಿ, ಮಮತೆ ಇವು ಮನುಷ್ಯರ ಮೇಲೆ ಮಾತ್ರವಲ್ಲದೆ ಪ್ರಾಣಿಪಕ್ಷಿಗಳ ತನಕವೂ ವ್ಯಾಪಿಸಿತ್ತು. ಅವರ ಗಿಣಿ ಗಂಗಾರಾಮನ ವಿಷಯವಾಗಿ ಅವರ ಜೀವನ ಚರಿತ್ರೆಯಿಂದ ಎಲ್ಲರೂ ಓದಿ ತಿಳಿದಿದ್ದಾರೆ. ಅವರ ಬಳಿ ಅನೇಕ ಬೆಕ್ಕುಗಳೂ ಇದ್ದವು. ಐದು-ಆರು ಇದ್ದಿರಬಹುದು. 'ಅತ್ತೆ' ಯವರು ಊಟಕ್ಕೆ ಕುಳಿತಾಗ ಅವರ ಬಳಿ ಈ ಬೆಕ್ಕುಗಳು ಕುಳಿತಿರುತ್ತಿದ್ದವು. 'ಅತ್ತೆ'ಯವರ ಊಟವಾದ ನಂತರ, ಅವುಗಳ ಎಲೆಗೂ ಅನ್ನ ಬಡಿಸುತ್ತಿದ್ದರು. ಅವುಗೆಳೆಂತಹ ಭಾಗ್ಯಶಾಲಿಗಳು! 'ಅತ್ತೆ'ಯವರ ಬಳಿ ನಾಲ್ಕು ಎತ್ತುಗಳಿದ್ದವು – ಮಹಂತ, ಮಹಾರಾಜ್, ಲಕ್ಷ್ಮೀಕಾಂತ ಹಾಗೂ ಇಂದ್ರರಾಜ. ಅವರು ಸಂಸಾರದ ಎಲ್ಲ ಕೆಲಸಗಳ ನಡುವೆಯೂ ಒಂದು ಬಾರಿ ದನಕರುಗಳ ಬಗ್ಗೆ ಕಾಳಜಿ ವಹಿಸಿ ನೋಡಿಕೊಳ್ಳುತ್ತಿದ್ದರು. ಅನ್ನದ ಗಂಜಿಯನ್ನು ಕುಡಿಸುವಂತೆ, ಅವುಗಳ ಬಳಿಗೆ ಬಂದು, ಬಳಿಕ ಅವುಗಳ ಕುತ್ತಿಗೆ, ಕೆನ್ನೆ ಇವನ್ನೆಲ್ಲ ಕೈಯಿಂದ ತಡವುತ್ತಿದ್ದರು. ಒಂದೊಂದು ಬಾರಿ ಅವುಗಳ ಕೋಡುಗಳಿಗೆ ಎಣ್ಣೆ ಹಚ್ಚುತ್ತಿದ್ದರು.

ದನಕರುಗಳನ್ನು ನೋಡಿಕೊಳ್ಳಲು ಇದ್ದ ಹುಡುಗನ ಹೆಸರು ದೀನೂ ಎಂದು. ಅವನು ನಮ್ಮ ವಯಸ್ಸಿನವನೇ. ಅವನು ಇಂದು ಬದುಕಿದ್ದರೆ, ಅವನಿಂದ ಎಲ್ಲರೂ 'ಅತ್ತೆ'ಯವರ ಬಗ್ಗೆ ಅನೇಕ ವಿಷಯಗಳನ್ನು ಕೇಳಿ ತಿಳಿಯಬಹುದಾಗಿತ್ತು. 'ಅತ್ತೆ' ಯವರಿಗೆ ಅವನ ಮೇಲೆ ತುಂಬಾ ಪ್ರೀತಿ. ದೀನುವಿನ ಬಗ್ಗೆ ಒಂದು ಘಟನೆ ನೆನಪಿಗೆ ಬರುತ್ತದೆ. ಅವನು ಬೆಳಿಗ್ಗೆ ತಿಂಡಿ ಮಾಡಿದ ಬಳಿಕ, ಎಂಟು ಗಂಟೆಯ ಸುಮಾರಿಗೆ ದನಗಳನ್ನು ಬಯಲಿನ ಕಡೆಗೆ ಮೇಯಿಸಲು ಕೊಂಡೊಯ್ಯುತ್ತಿದ್ದ. ಸುಮಾರು ಒಂದು ಘಂಟೆಯ ಹೊತ್ತಿಗೆ ಮರಳುತ್ತಿದ್ದ. ಬಳಿಕ ದನಗಳನ್ನು ಕಟ್ಟಿಹಾಕಿ, ಸ್ನಾನ ಮಾಡಿ ಬಂದು ಊಟ ಮಾಡುತ್ತಿದ್ದ. 'ಅತ್ತೆ' ಯವರು ಎಲ್ಲರ ಊಟ ಮುಗಿದಿದ್ದರೂ, ದೀನುವಿಗಾಗಿ ಕಾದು ಕುಳಿತಿರುತ್ತಿದ್ದರು. ಒಂದು ದಿನ ದೀನೂ ಬರಲು ತುಂಬ ತಡವಾಗಿಬಿಟ್ಟಿತು. ಅವನು ಬಯಲಿಗೆ ಹೋಗಿ, ಉಳಿದ ದನ ಕಾಯುವ ಹುಡುಗರೊಂದಿಗೆ ಗೋಲಿ ಆಟ ಆಡುತ್ತಿದ್ದ. ಅಂದು ಆಟವಾಡುತ್ತಲೇ ಇದ್ದವನು, ಮರಳುವಾಗ ತುಂಬ ತಡವಾಗಿಬಿಟ್ಟಿತು. ಅತ್ತೆಯವರು ತುಂಬಾ ಹೊತ್ತು ಕಾದು ಕುಳಿತ್ತಿದ್ದು, ಆಗಲೇ ಮೂರು ಗಂಟೆ ಆಗಿಬಿಟ್ಟಿತ-ಮನೆಯ ಹೆಣ್ಣುಮಕ್ಕಳೆಲ್ಲ ಒತ್ತಾಯಿಸಿದಾಗ, ದೀನುವಿಗಾಗಿ ಊಟವನ್ನು ಮುಚ್ಚಿ ಇಟ್ಟು, ಎಲ್ಲರೂ ಜೊತೆಗೆ ಊಟಕ್ಕೆ ಕುಳಿತರು. ಆಗಲಷ್ಟೇ ದೀನು ಮರಳಿದ. ಅವನನ್ನು ನೋಡಿದ ಅತ್ತೆಯವರು ಹೇಳಿದರು, ''ಏನು ಮಗೂ, ಇಷ್ಟು ತಡ ಮಾಡಿಬಿಟ್ಟೆಯಲ್ಲ! ನೋಡು ಅವರೆಲ್ಲ ಒತ್ತಾಯ ಮಾಡಿ ನನ್ನನ್ನು ಊಟಕ್ಕೆ ಕುಳ್ಳಿರಿಸಿದರು. ನಿನ್ನ ಊಟವನ್ನು ನಾನು ಮುಚ್ಚಿಟ್ಟಿದ್ದೇನೆ. ನೀನು ಸ್ನಾನ ಮಾಡಿ ಬಂದು, ಮುಚ್ಚಿದ ತಟ್ಟೆಯನ್ನು ತೆಗೆದುಕೊಂಡು ಊಟ ಮಾಡಿಕೋ.'' ದೀನೂ ಬೇಗನೇ ಸ್ನಾನ ಮಾಡಿ ಬಂದು ಊಟಕ್ಕೆ ಕುಳಿತ; ಅತ್ತೆ ಕೂಡ ಊಟ ಮಾಡತೊಡಗಿದರು. ದೀನುವಿನ ಊಟ ಸುಮಾರಾಗಿ ಮುಗಿಯುತ್ತ ಬಂದಿತ್ತು. ಅತ್ತೆ ಹೇಳಿದರು, ''ಮಗೂ ದೀನು, ಇನ್ನೂ ಸ್ವಲ್ಪ ಅನ್ನ ಹಾಕಿಸಿಕೊಳ್ಳುತ್ತೀಯಾ'' ದೀನೂ ತಡವರಿಸಲಾರಂಭಿಸಿದ. ಏಕೆಂದರೆ ಅತ್ತೆ ಊಟಮಾಡುತ್ತಿದ್ದಾರೆ, ಅನ್ನ ಬಡಿಸಲು ಪಕ್ಕದಲ್ಲಿ ಬೇರೆ ಯಾರೂ ಇರಲಿಲ್ಲ. ಅತ್ತೆಯವರ ಊಟ ಇನ್ನೂ ಮುಗಿದಿಲ್ಲ. ಅವರಿಗೆ ವಯಸ್ಸಾಗಿದೆ, ಬಾಯಲ್ಲಿ ಹಲ್ಲುಗಳಿಲ್ಲ. ಹೀಗಾಗಿ ಅವರ ಊಟ ನಿಧಾನವಾಗುತ್ತಿದೆ. ಅವನ ಗೊಂದಲ ತಿಳಿದು ಅತ್ತೆ ದೀನೂಗೆ ಹೇಳಿದರು: ''ಮಗೂ, ತಟ್ಟೆಯನ್ನು ಇತ್ತ ತೆಗೆದುಕೊಂಡು ಬಾ ಮತ್ತೆ.'' ದೀನು ತಟ್ಟೆಯನ್ನು ಹತ್ತಿರಕ್ಕೆ ತಂದ. ಅತ್ತೆಯವರು ತಮ್ಮ ತಟ್ಟೆಯಿಂದ ಸ್ವಲ್ಪ ಅನ್ನವನ್ನು ದೀನುವಿನ ತಟ್ಟೆಗೆ ಹಾಕಿದರು. ದೀನೂ ಅದನ್ನು ಅತ್ಯಂತ ತೃಪ್ತಿಯಿಂದ ಊಟ ಮಾಡಿದ. ಮರುದಿನ ಅತ್ತೆಯವರು ಏಕಾಂತದಲ್ಲಿ ಸಿಕ್ಕಿದಾಗ ದೀನೂ ಕೇಳಿದ: ''ಅಲ್ಲಮ್ಮಾ, ಒಂದು ಮಾತು ಕೇಳಲೆ?'' ಅತ್ತೆ ಹೇಳಿದರು: ''ಹೇಳಲ್ಲ ಮತ್ತೆ, ಅದೇನು ಹೇಳುತ್ತೀಯೋ!''

**ದೀನೂ :** ''ಅಮ್ಮಾ ನಿಮಗೆ ಅಡುಗೆ ಬೇರೆ ಮಾಡುತ್ತೀರಾ? ನಮ್ಮ ಅಡುಗೆ ಬೇರೆ ಮಾಡಲಾಗುತ್ತದೆಯೆ?''

**ಅತ್ತೆ :** ''ಅದೇನು ಮಗೂ? ಇದೇಕೆ ಹೀಗೆ ಕೇಳುತ್ತೀಯಾ?''

**ದೀನೂ :** ''ಹಾಗಿದ್ದರೆ ನಿನ್ನೆ ನಿಮ್ಮ ತಟ್ಟೆಯಿಂದ ಕೊಟ್ಟ ಅನ್ನ ಅಷ್ಟೊಂದು ಚೆನ್ನಾಗಿತ್ತಲ್ಲ, ಏಕೆ? ಅಂಥ ಅನ್ನವನ್ನು ನಾನು ಜೀವನದಲ್ಲಿ ಎಂದಿಗೂ ತಿಂದಿಲ್ಲಮ್ಮಾ.''

**ಅತ್ತೆ :** ''ಇಲ್ಲ ಮಗೂ! ಒಂದೇ ಪಾತ್ರೆಯಲ್ಲಿ ಅನ್ನ ಬೇಯಿಸುತ್ತೇವೆ. ನಿಮಗೆ ಯಾವ ಪಾತ್ರೆಯಿಂದ ಅನ್ನ ಬಡಿಸಿದೆವೋ, ಅದೇ ಪಾತ್ರೆಯಿಂದಲೇ ನಾನೂ ಅನ್ನ ಹಾಕಿಸಿಕೊಂಡೆ.''

ಅತ್ತೆಯವರು ತಮ್ಮ ದೈವೀ ಮಹಿಮೆಯನ್ನು ಅಡಗಿಸಿಟ್ಟುಕೊಂಡರು. ಅವರ ಪ್ರಸಾದವಾಗಿ ಸ್ವೀಕರಿಸಿದ ಅನ್ನ ಅಮೃತಕ್ಕೆ ಸಮಾನ ಎಂಬುದು ಪಾಪ, ದೀನುವಿಗೆ ಹೇಗೆ ಅರ್ಥವಾಗಬೇಕು! ದೀನುವಂತೂ ಮಹಾ ಭಾಗ್ಯವಂತ – ಅವರ ಮಹಾ ಪ್ರಸಾದವನ್ನೇ ಪಡೆದನಲ್ಲ!

ಅತ್ತೆಯವರು ಜಾತ್ರಾ(ನಾಟಕ) ನೋಡುವುದನ್ನು ಬಹಳ ಇಷ್ಟಪಡುತ್ತಿದ್ದರು. ಆ ದಿನಗಳಲ್ಲಿ ಹಳ್ಳಿಗಳಲ್ಲಿ ಇಂದಿನಂತೆ ರೇಡಿಯೋ ಅಥವಾ ಸಿನಿಮಾ ಇತ್ಯಾದಿಗಳು ಇರಲಿಲ್ಲ. ಹೀಗಾಗಿ ಹಳ್ಳಿಯಲ್ಲಿ ಏನಾದರೂ ಹಬ್ಬಹರಿದಿನಗಳು ಇದ್ದಾಗ, ಬಾವುಲ್ ಹಾಡು, ತರಜಾ (ಆಶುಕವಿತೆ-ಹಾಡುಗಳ ಸ್ಪರ್ಧೆ), ಜಾತ್ರಾ, ರಾಮಾಯಣ ಗಾನ, ಚಬ್ಬಿಶ್ ಪ್ರಹರ್, ಮನಸಾರ್ ಪಾಂಚಾಲಿ ಇತ್ಯಾದಿಗಳು ನಡಯುತ್ತಿದ್ದವು. 'ಚಬ್ಬಿಶ್ ಪ್ರಹರ್' (೨೪ ಗಂಟೆಗಳು)ನಲ್ಲಿ ಭಾಗವತದ ಕಥೆ ನಡೆಸಿಕೊಡಲು ನದಿಯಾ ಜಿಲ್ಲೆಯ ನಾರಾಯಣಪುರದ ತಂಡ, ಪಶ್ಚಿಮದ ರಾಮಡಿಯಾ ತಂಡ ಹಾಗೂ ಬರಣಡಂಗಾದ ತಂಡಗಳು ಬರುತ್ತಿದ್ದವು. ಜ್ಯೇಷ್ಠಮಾಸದಲ್ಲಿ ಹಳ್ಳಿಯಲ್ಲಿ ಶೀತಲಾಮಾತೆಯ ಪೂಜೆ ನಡೆಯುತ್ತಿತ್ತು. ಆಗ 'ಚಬ್ಬಿಶ್ ಪ್ರಹರ್' ಅಥವಾ ಜಾತ್ರಾ ನಡೆಯುತ್ತಿತ್ತು. ಆಶ್ವೀಜ-ಕಾರ್ತಿಕ ಮಾಸದಲ್ಲಿ ಸಿಂಹವಾಹಿನೀದೇವಿಯ ಮಂದಿರದಲ್ಲಿ ರಾಮಾಯಣ ಗಾನ ಹಾಗೂ ಜಾತ್ರಾ ನಡೆಯುತ್ತಿತ್ತು. ರಾಮಾಯಣ ಗಾನ ಮಾಡಲು ಪುಕುರಿಯಾದ ಬಾಂಕೂ ಘೋಷಾಲ್ ಹಾಗೂ ಭುರಸುವೋದ ಸತೀಶ ಆಚಾರ್ಯ ಬರುತ್ತಿದ್ದರು. ಅವರಿಗೆ ಅತ್ತೆಯವರ ಮೇಲೆ ಅತ್ಯಂತ ಶ್ರದ್ಧಾಭಕ್ತಿಗಳಿದ್ದವು. ಎರಡು ಬಗೆಯ ಜಾತ್ರಾ ನಡೆಯುತ್ತಿತ್ತು-ಕೃಷ್ಣ ಜಾತ್ರಾ ಹಾಗೂ ಸಾಧಾರಣ ಜಾತ್ರಾ. ಕೃಷ್ಣ ಜಾತ್ರಾ ನಡೆಸಿಕೊಡಲು ಸಿಹೋರ್‌ನ ರಾಮಛುತೋರ್‌ನ ತಂಡ, ಹಾಗೂ ಬೇಜೋ ಸಂತೋಷಪುರದ ನಳಿನೀ ಮಂಡಲ್ ಹಾಗೂ ಅನುಕೂಲ ಮಂಡಲ್ ಇವರ ತಂಡ ಬರುತ್ತಿದ್ದವು. ಹಲವು ಬಾರಿ ಜಗದ್ಧಾತ್ರೀ ಪೂಜೆಯ ಸಮಯದಲ್ಲಿ ಕೃಷ್ಣಜಾತ್ರಾ ನಡೆದುದನ್ನು ನಾನು ನೋಡಿದ್ದೇನೆ. ನನಗೆ ನೆನಪಿರುವಂತೆ, ಜಾತ್ರೆಯ ವಿಷಯಗಳು ಹೆಚ್ಚಾಗಿ ಪ್ರಹ್ಲಾದ ಚರಿತೆ, ಧ್ರುವಚರಿತೆ, ನಿಮಾಯಿ ಸಂನ್ಯಾಸ, ನವಾಬ ಸಿರಾಜದ್ದೌಲ ಇತ್ಯಾದಿ ಇರುತ್ತಿದ್ದವು.

ಸಾಧಾರಣ ಜಾತ್ರೆಗಾಗಿ ಕುಮುಡಸೇ-ಕಾನ್ಪುರದ ತಂಡ, ರಾಮಜೀವನಪುರದ ತಂಡ, ಬಗಳಡಿಯ ತಂಡ ಇತ್ಯಾದಿಗಳು ಬಂದು ಜಯರಾಮಬಾಟಿಯಲ್ಲಿ ಜಾತ್ರೆ ಮಾಡಿದ್ದವು. ಜಗದ್ಧಾತ್ರೀಪೂಜೆಯ ಸಮಯದಲ್ಲಿ ಬಾವುಲ್ ಹಾಡು ಹಾಗೂ ತರಜಾ ನಡೆಯುತ್ತಿದ್ದವು. ಬಾವುಲ್ ಹಾಡನ್ನು ಹಾಡಲು ಕ್ಷುದಿರಾಮ ಗೋದ್ ಹಾಗೂ ಸಾಥವೇಡೆಯ ಲಾಲೂ ಜೇಲೇ ಬರುತ್ತಿದ್ದರು. ಅತ್ತೆಯವರಿಗೆ ಲಾಲೂ ಮೇಲೆ ತುಂಬಾ ಪ್ರೀತಿ. ಸಾತವೇಡೆಯ ಪಾಂಚೂರಾಯ್, ಮುಯಿದಾಡಾದ ಮೃಗೇಂದ್ರ ಧಾಡಾ ಮುಂತಾದವರು ತರಜಾ ಹಾಡುತ್ತಿದ್ದರು. ಮಾನಸಾ ದೇವಿಯ ಮಂದಿರದಲ್ಲಿ ನಡುನಡುವೆ ಮನಸಾ ಪಾಂಚಾಲೀ ಗಾನ ಹಾಗೂ ಮನಸಾ ಭಾಸಾನದ ಹಾಡು ನಡೆಯುತ್ತಿತ್ತು. ಆ ತಂಡಗಳ ಹೆಸರು ನೆನಪಿಲ್ಲ; ಆದರೆ ಬೆಂಗಾಯಿ ಊರಿನ ಪಾಂಚಾಲಿ ತಂಡ ಎಂದು ಜನರು ಹೇಳುತ್ತಿದ್ದರು. ಚಿಕ್ಕಂದಿನಲ್ಲಿ ಅತ್ತೆ ಹಲವು ಬಾರಿ ಜಾತ್ರಾ, ರಾಮಾಯಣಗಾನ, ಬಾವುಲ್ ಹಾಡು, ತರಜಾ ಇತ್ಯಾದಿಗಳನ್ನೆಲ್ಲ ಕೇಳುತ್ತಿದ್ದುದ್ದನ್ನು ನಾನು ಕಂಡಿದ್ದೇನೆ. ಆ ಸಮಯದಲ್ಲೆಲ್ಲ ನೀರಿನ ಹೂಜಿ, ವೀಳೆಯದ ಡಬ್ಬ ಅವರೊಂದಿಗೆ ಇರುತ್ತಿದ್ದವು. ಕಾರ್ಯಕ್ರಮವನ್ನು ಪೂರ್ತಿಯಾಗಿ ನೋಡಿದ ಮೇಲೆ ಅವರು ಮನೆಗೆ ಮರಳುತ್ತಿದ್ದರು. ಆ ಕಾಲದಲ್ಲಿ ಹೆಚ್ಚಾಗಿ ಈ ಕಾರ್ಯಕ್ರಮಗಳೆಲ್ಲ ರಾತ್ರಿ ಹೊತ್ತಿನಲ್ಲೇ ಆರಂಭವಾಗುತ್ತಿದ್ದವು. ನಸುಕಿನಲ್ಲಿ ಕೊನೆಗೊಳ್ಳುತ್ತಿದ್ದವು. ರಾತ್ರಿಯೆಲ್ಲ ಎಚ್ಚರವಿದ್ದು ಜಾತ್ರಾ ನೋಡಿದ್ದರೂ, ಬೆಳಗಿನ ಹೊತ್ತು ಸರಿಯಾದ ಸಮಯಕ್ಕೆ ಅವರು ಎದ್ದುಬಿಡುತ್ತಿದ್ದರು; ನಿತ್ಯಪೂಜೆ ಹಾಗೂ ಸಂಸಾರದ ಕೆಲಸಗಳನ್ನು ಮಾಡುತ್ತಿದ್ದರು.

ಅತ್ತೆಯವರ ಎಲ್ಲ ಸೊಸೆಯಂದಿರನ್ನು ಹಾಗೂ ಅವರ ಗಂಡಂದಿರನ್ನು ನಾನು ನೋಡಿದ್ದೇನೆ. ರಾಧುವಂತೂ ಅತ್ತೆಯವರಿಗೆ ಸಾಕಷ್ಟು ಕಾಟ ಕೊಟ್ಟುಬಿಟ್ಟಳು. ಅದನ್ನು ನೋಡಿ ನಮಗೆಲ್ಲ ತುಂಬ ಸಂಕಟವಾಗುತ್ತಿತ್ತು. ಕೋಪವೂ ಬರುತ್ತಿತ್ತು. ಲಲಿತ ಬಾಬು[೧], ಶರತ್ ಮಹಾರಾಜ್, ಮಾಸ್ಟರ್ ಮಹಾಶಯ ಇವರೆಲ್ಲ ಬಂದಾಗ ಜಯರಾಮಬಾಟಿಯಲ್ಲಿ ಎಂಥ ಆನಂದದ ಜಾತ್ರೆ ನಡೆಯುತ್ತಿತ್ತು! ಈಗಂತೂ ಕಲ್ಕತ್ತಾದಿಂದ ಪ್ರತಿದಿನವೂ ಎಷ್ಟೋ ಮಂದಿ ಭಕ್ತರು ಜಯರಾಮ ಬಾಟಿಗೆ ಬರುತ್ತಿದ್ದಾರೆ. ಆದರೆ ಆಗಿನ ಕಾಲದಲ್ಲಿ ಪರಿಸ್ಥಿತಿ ಬೇರೆಯಾಗಿತ್ತು. ಮೊದಮೊದಲು ಅತ್ತೆಯವರ ಮನೆಯಲ್ಲಿ ದನಕರುಗಳಿರಲಿಲ್ಲ. ಕಲ್ಕತ್ತೆಯಿಂದ ಭಕ್ತರು ಬಂದರೆ ಚಹಾ ಮಾಡಬೇಕಿತ್ತು-ಅದಕ್ಕೆ ಹಾಲು ಬೇಕು. ಆಗ ಅತ್ತೆ ಗಯಲಾಪಾಡಾಗೆ ಓಡಿ ಹೋಗುತ್ತಿದ್ದರು. ಲಬೂನಾಗ್, ಶ್ರೀರಾಮನಾಗ್, ಬಿಹಾರಿ ಮಾಲ್ - ಇವರೆಲ್ಲ ಹಾಲಿನ ವ್ಯಾಪಾರ ಮಾಡುತ್ತಿದ್ದರು. ಗಯಲಾದ ಸೊಸೆ ಆಹ್ಲಾದಿನಿ, ನಯನಾ ಇವರೆಲ್ಲ ಅತ್ತೆಯವರನ್ನು 'ಮಾ-ಠಾಕೂರನ್'('ಶ್ರೀಮಾತೆ' ಅಥವಾ 'ಜಗನ್ಮಾತೆ' ಎಂದರ್ಥ) ಎಂದು ಕರೆಯುತ್ತಿದ್ದರು. ಗಯಲಾದ ಸೊಸೆಯರೊಂದಿಗೆ ಅತ್ತೆಯವರು ತುಂಬಾ ಅನ್ಯೋನ್ಯವಾಗಿದ್ದರು. ಅವರಲ್ಲಿ ದನಗಳು ಕರು ಹಾಕಿಬಿಟ್ಟರೆ, ಅವರು ಅತ್ತೆಯವರ ಮನೆಯಲ್ಲಿ ಶ್ರೀರಾಮಕೃಷ್ಣರ ನೈವೇದ್ಯ ಮಾಡಲು ಹಾಲು ತಂದುಕೊಡುತ್ತಿದ್ದರು. ಇದ್ದಕ್ಕಿದ್ದಂತೆ ಹಾಲು ಬೇಕಾಗಿ ಬಂದರೆ ಅತ್ತೆಯವರಿಗೆ ಯಾರೂ ಇಲ್ಲವೆನ್ನುತ್ತಿರಲಿಲ್ಲ. ಅವರ ತಮ್ಮಂದಿರು ಅಥವಾ ಅವರ ಮಕ್ಕಳಿಗೆ ಯಾರೂ ಏನನ್ನೂ ಸಾಮಾನ್ಯವಾಗಿ ಕೊಡುತ್ತಿರಲಿಲ್ಲ. ಅವರೆ

---

೧ ಲಲಿತ ಮೋಹನ ಚಟ್ಟೋಪಾಧ್ಯಾಯ. ಅವನು ಹಾಗೂ ಅವನ ಪತ್ನಿ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದು ಅವರ ಶಿಷ್ಯರಾಗಿದ್ದರು. ಶ್ರೀಮಾತೆಯವರ ಸೇವೆಗೆ ಅವನು ಯಾವಾಗಲೂ ಕಾತರನಾಗಿರುತ್ತಿದ್ದ. ಶ್ರೀಮಾತೆಯವರಿಗೆ ಮೊದಲ ಬಾರಿಗೆ ಗ್ರಾಮೋಫೋನ್ ಕೇಳಿಸಲೆಂದು ಅದನ್ನು ಜಯರಾಮಬಾಟಿಗೆ ತಂದಿದ್ದ. ಗ್ರಾಮೋಫೋನ್ ಕೇಳಲು ಶ್ರೀಮಾತೆಯವರ ಮನೆಯ ಮುಂದೆ ಜನರು ಗುಂಪಾಗಿ ಸೇರುತ್ತಿದ್ದರು. *(-ಸಂ.)*

ಲ್ಲರೂ ಅತ್ತೆಯವರಿಗೆ ಎಲ್ಲವನ್ನೂ ಕೊಡಲು ಬಯಸುತ್ತಿದ್ದರು. ಹಾಗೆ ಕೊಟ್ಟ ಬಳಿಕ ಅವರು ಧನ್ಯರೆನಿಸಿ ಹೋಗುತ್ತಿದ್ದರು.

ಒಂದು ಘಟನೆ ನೆನಪಾಗುತ್ತಿದೆ. ಇದನ್ನು ನನ್ನ ಅಜ್ಜಿಯವರು ಹೇಳಿದ್ದರು. ಅಜ್ಜಿ ಹೀಗೆಂದರು: ''ನೋಡು, ಮುಖರ್ಜಿಯವರ ಸಾರು (ಶಾರದಾ) ಇದ್ದಾಳಲ್ಲ, ಅವಳು ಅವಳಲ್ಲ, ನಿನಗೆ ಮುಂದೆ ಗೊತ್ತಾದೀತು. ಅವಳು ದೇವತೆಯೇ! ಒಂದು ಬಾರಿ ಎರಡು ವರ್ಷಗಳ ಕಾಲ, ಮೇಲಿಂದ ಮೇಲೆ ಬರಗಾಲ ಬಂತು. ಮಳೆಯ ಸುದ್ದಿಯೇ ಇಲ್ಲ. ಗದ್ದೆ ಬಯಲಿನ ಫಸಲೆಲ್ಲವೂ ಅಲ್ಲಿಯೇ ಒಣಗಿಹೋದವು. ಆಮೋದರ ನದಿಯ ತೀರದಲ್ಲಿ ಏನೋ ಒಂದಿಷ್ಟು ಭೂಮಿಯ ಧಾನ್ಯ ಉಳಿದಿತ್ತು. ಅವೂ ಮುಗಿಯುತ್ತ ಬಂದಿತ್ತು. ಭಾದ್ರಪದದಲ್ಲೂ ಕೂಡ ಮಳೆಯಾಗಲಿಲ್ಲ. ಗ್ರಾಮದ ಮುಖಂಡರೆಲ್ಲ ಸೇರಿ ಒಂದು ದಿನ ಮಾತುಕತೆ ನಡೆಸಿದರು – ಈಗ ಮಳೆಯಾಗದಿದ್ದರೆ, ಊಟವಿಲ್ಲದೆ ಮಕ್ಕಳು ಮರಿಗಳೆಲ್ಲ ಸತ್ತುಹೋಗುವವು ಎಂದು. (ಆಗಿನ ಕಾಲದಲ್ಲಿ ಹಳ್ಳಿಯಲ್ಲಿ ಗ್ರಾಮದ ಮುಖಂಡರು ಆಗಿದ್ದವರು–ರಾಜಕುಮಾರ ಮುಖ್ಯೋಪಾಧ್ಯಾಯ, ಶಿವರಾಮ ಬಂದ್ಯೋಪಾಧ್ಯಾಯ, ಸತೀಶ ಸಾಮುಯಿ, ಕೇದಾರ್ ಘೋಷ್, ಕೈಲಾಸ ಮಂಡಲ್, ಮಾಖನ್ ಮಂಡಲ್, ಯೋಗೀಂದ್ರ ವಿಶ್ವಾಸ್, ನಗೇಂದ್ರ ರಾಯೇನ್–ಮುಂತಾದವರು) ಅವರೆಲ್ಲ ಹೋಗಿ ಸಾರುವನ್ನು ಭೇಟಿಯಾದರು. ಸಾರು ಹೇಳಿದಳು, ''ಠಾಕೂರರಿಗೆ ಪ್ರಾರ್ಥನೆ ಮಾಡುತ್ತೇನೆ.'' ಮರುದಿನವೇ ಮುಸಲಧಾರೆಯಂತೆ ಮಳೆಯಾಯಿತು. ಆ ವರ್ಷ ಈ ಭೂಮಿಯಲ್ಲಿ ಫಸಲು ಬಂದಂತೆ ಇನ್ನೆಂದಿಗೂ ಬಂದಿಲ್ಲ. ದೈವೀ ಮಹಾತ್ಮೆ ಅಂತ ಯಾವುದಕ್ಕೆ ಹೇಳುತ್ತಾರೆ, ಗೊತ್ತಾಯಿತೆ?'' ಈ ಘಟನೆಯನ್ನು ನಾವು ಭಾನು ಅತ್ತೆಯವರಿಂದಲೂ ಕೇಳಿದ್ದೇವೆ.

ಈಗ ನನ್ನ ವಯಸ್ಸು ಸುಮಾರು ೯೬;[೨] ಈಗಂತೂ ಚೆನ್ನಾಗಿ ಬದುಕಿ ಉಳಿದಿದ್ದೇನೆ. 'ಅತ್ತೆ'ಯವರ ಆಶೀರ್ವಾದಿಂದ ಹೀಗಿದ್ದೇನೆ. ನಮ್ಮ ನೆಲದಲ್ಲಿ ಅತ್ತೆಯವರ ಪಾದಧೂಳಿ ಬಿದ್ದಿದೆ. ಒಂದೊಂದು ಬಾರಿ ಅವರು ನನ್ನ ತಾಯಿಯವರೊಂದಿಗೆ ಮಾತುಕತೆ ನಡೆಸುವಂತೆ, ಅಂಗಳದಲ್ಲಿ ಅಜ್ಜಿಯವರೊಂದಿಗೆ ಮಾತನಾಡುತ್ತಿರುವಂತೆ ಕಂಡಿದ್ದೇನೆ. ಕಣ್ಣು ಮುಚ್ಚಿದರೆ ಸಾಕು, ಎಲ್ಲವೂ ಜೀವಂತವಾಗಿ ನನ್ನ ಕಣ್ಣ ಮುಂದೆ ಬಂದು ನಿಲ್ಲುತ್ತವೆ. ನಮಗೆ ಆಗ ಅರ್ಥವಾಗಲಿಲ್ಲ, ಅದರೆ ನಾವು ಸಾಕ್ಷಾತ್ ಜಗಜ್ಜನನಿಯನ್ನೇ ನೋಡಿದ್ದೇವೆ, ಅವರ ಪಾದಗಳನ್ನೇ ಸ್ಪರ್ಶಿಸಿದ್ದೇವೆ! ಆದ್ದರಿಂದಲೇ ಇಷ್ಟು ವಯಸ್ಸಾದರೂ ನಾನು ಇಷ್ಟೊಂದು ಚೆನ್ನಾಗಿದ್ದೇನೆ. ಎಷ್ಟೋ ಹಿಂದಿನ ಕಥೆ, ಆದರೆ ಅದೆಲ್ಲವೂ ನನ್ನ ಮನಸ್ಸಿನಲ್ಲಿ ದೃಢವಾಗಿ ಅಲಂಕೃತವಾಗಿ ನಿಂತಿವೆ. ಅವರ ಕೃಪೆ ನಮ್ಮೆಲ್ಲರ ಸುತ್ತ ಹಬ್ಬಿದೆಯೆಂದು ನನಗೆ ಗೊತ್ತು. ನಮ್ಮ ಕುಟುಂಬದಲ್ಲಿ ಇಂದು ಏನೇನು ಏಳಿಗೆಯುಂಟಾಗಿವೆ, ಎಲ್ಲವೂ 'ಅತ್ತೆ'ಯವರ ಆಶೀರ್ವಾದದಿಂದಲೇ ನಡೆದಿವೆ. ಪರಲೋಕವೊಂದಿದ್ದರೆ, ಅಲ್ಲೂ ನಾನು ಅತ್ತೆಯವರ ಚರಣಗಳ ಆಶ್ರಯವನ್ನೇ ಬಯಸುವೆ. ಅವರ ಬಳಿ ಇದೇ ನನ್ನ ಪ್ರಾರ್ಥನೆ. ✷

---

೨ ೧೯೯೫ರ ಜುಲೈ ೬ರಂದು ಲೇಖಕರು ತೀರಿಕೊಂಡರು. *(–ಸಂ.)*

***ಸಂಗ್ರಹ:*** *ಅಧ್ಯಾಪಕ ತಡಿತ್‌ಕುಮಾರ್ ಬಂದ್ಯೋಪಾಧ್ಯಾಯ*

***ದಿನಾಂಕ:*** *೧೯೯೫ರ ಜನವರಿ ೧–೨*

## ಶ್ರೀಮಾತೆಯವರ ಉಪದೇಶಗಳು



✷ **ಶಿಷ್ಯ :** ಯಾವಾಗ ಸಾಧನೆಗೆ ಸಮಯವನ್ನು ಮಾಡಿಕೊಳ್ಳಬೇಕು?

**ಶ್ರೀಮಾತೆ :** ಸಂಧಿಕಾಲವು ಭಗವಂತನನ್ನು ಕರೆಯಲು ಅತ್ಯಂತ ಪ್ರಶಸ್ತವಾದ ಸಮಯ. ರಾತ್ರಿ ಕಳೆದು ಬೆಳಗಾಗುತ್ತದೆ; ದಿನ ಕಳೆದು ರಾತ್ರಿಯಾಗುತ್ತದೆ — ಇದೇ ಸಂಧಿಕಾಲ. ಈ ಸಮಯದಲ್ಲಿ ಮನಸ್ಸು ಪವಿತ್ರವಾಗಿರುತ್ತದೆ.

✷ (ಮನಸ್ಸಿನ ದೌರ್ಬಲ್ಯದ ಬಗ್ಗೆ) ಮಗೂ, ಅದು ಪ್ರಕೃತಿ ನಿಯಮ. ಹೇಗೆ ಅಮಾವಾಸ್ಯೆ, ಹುಣ್ಣಿಮೆ ಎನ್ನುವುದಿದೆಯೋ ಹಾಗೆ ಮನಸ್ಸೂ ಕೆಲವೊಮ್ಮೆ ಉನ್ನತ ಭಾವದಿಂದ ಇರುತ್ತದೆ, ಕೆಲವೊಮ್ಮೆ ಕೆಟ್ಟ ಭಾವನೆಗಳಿಂದ ತುಂಬಿರುತ್ತದೆ.

✷ **ಶಿಷ್ಯ :** ಸಂಸಾರದಲ್ಲಿ ಇರುವುದರಿಂದ ಏನನ್ನೂ ಸಾಧಿಸಲಾಗದು.

**ಶ್ರೀಮಾತೆ :** ಸಂಸಾರವೆಂದರೆ ದೊಡ್ಡ ಕೆಸರಿನ ಕೊಳ. ಅದರಲ್ಲಿ ಬಿದ್ದುಬಿಟ್ಟರೆ ಏಳುವುದು ಅತ್ಯಂತ ಕಷ್ಟ. ಬ್ರಹ್ಮ, ವಿಷ್ಣು ಮೊದಲಾದವರೇ ಅದರಲ್ಲಿ ಸಿಕ್ಕು ಉಸಿರುಗಟ್ಟಿ ಹೋಗುತ್ತಾರೆ ಎಂದ ಮೇಲೆ ಮನುಷ್ಯ ಎಷ್ಟರವನು! ಭಗವಂತನ ನಾಮಸ್ಮರಣೆ ಮಾಡು. ಅವನ ನಾಮಜಪ ಮಾಡುತ್ತ ಒಂದು ದಿನ ಅವನು ಸಂಸಾರವನ್ನು ಕತ್ತರಿಸಿಬಿಡುತ್ತಾನೆ. ಅವನು ತಾನಾಗಿ ಅದನ್ನು ಕತ್ತರಿಸದಿದ್ದರೆ ಹೇಗೆ ತಾನೇ ಉದ್ಧಾರ ಆಗಬಹುದು? ಆದ್ದರಿಂದ ಭಗವಂತನಲ್ಲಿ ದೃಢವಾದ ವಿಶ್ವಾಸವನ್ನು ಹೊಂದಿರು. ಸಂಸಾರದಲ್ಲಿ ಮಕ್ಕಳಿಗೆ ತಾಯಿತಂದೆಯರು ಹೇಗೆ ಆಶ್ರಯಸ್ಥಾನವೋ ಹಾಗೆ ನೀನು ಶ್ರೀರಾಮಕೃಷ್ಣರನ್ನು ಆಶ್ರಯಸ್ಥಾನವೆಂದೇ ತಿಳಿ.

*('ಶ್ರೀ ಶಾರದಾದೇವಿ ವಚನವೇದ', ಪು. ೪೫೩–೫೪)*